ದಿನಾಂಕ 09.10.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ. ಪಿ.ಕೆ.ಎಸ್ ವಕೀಲರಿಂದಃ</u>

ಪ್ರತಿವಾದಿ ಈಗ ಕತಾರ್ ನಲ್ಲಿ ಇದ್ದಾರೆ, ಅವರು ಹೋಗಿ 2 ವರ್ಷಗಳಾಗಿರುತ್ತದೆ. ಪ್ರತಿವಾದಿಗೆ ಸೇರಿದ ಆಸ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ನನಗೆ ಇದೆ. ಯಾವ ಗ್ರಾಮದಲ್ಲಿ, ಸರ್ವೇ, ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ ತಣ್ಣೀರುಪಂಥ ಗ್ರಾಮ, ಸರ್ವೇ ನಂ. 165/2 ರಲ್ಲಿದ್ದು, ವಿಸ್ತೀರ್ಣ ಎಷ್ಟು ಎಂದು ಹೇಳಲು ಆಗುವುದಿಲ್ಲ. ತಣ್ಣೀರುಪಂಥ ಗ್ರಾಮದಲ್ಲಿ ಸರ್ವೇ ನಂ. 112/1 ರಲ್ಲಿ ಪ್ರತಿವಾದಿಗೆ ಸೇರಿದ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ತಣ್ಣೀರುಪಂಥ ಗ್ರಾಮದಲ್ಲಿ ಸರ್ವೇ ನಂ. 112/1 ರಲ್ಲಿ ಪ್ರತಿವಾದಿಗೆ ಆಸ್ತಿ ಇದೆ ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಇಲ್ಲ. ಈ ದಾವೆಯ ವಾದಿ ಪರಿಚಯ ಇದೆಯಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಹೇಳುತ್ತಾರೆ. ಎಷ್ಟು ವರ್ಷಗಳಿಂದ ದಾವಾ ಆಸ್ತಿಯಲ್ಲಿ ವಾಸವಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ.

2. ನಿಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ಮಾಹಿತಿ ಕೊಟ್ಟವರು ಯಾರು ಎಂದರೆ ಸಾಕ್ಷಿ ಪ್ರತಿವಾದಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಅದರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತು. ಏನು ಬರೆದಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿ ನನಗೆ ಜಿ.ಪಿ.ಎ ಕೊಟ್ಟಿದ್ದಾರೆ ಎಂದು ಬರೆದಿದೆ, ಸರ್ವೇ ನಂ. 165/2 ರಲ್ಲಿರುವ ಜಾಗ ಪ್ರತಿವಾದಿಯ ಹೆಸರಿನಲ್ಲಿ ಇದೆ, ಅದರ ಜೊತೆ ಸೇರಿಕೊಂಡಿರುವ ಸರ್ವೇ ನಂ. 112/ಪಿ1 ರ ಜಾಗ ಪ್ರತಿವಾದಿಯ ಸ್ವಾದೀನದಲ್ಲಿ ಇದೆ ಎಂದು ಬರೆದಿದ್ದಾರೆ ಎಂದು ಅಷ್ಟು ಹೇಳಬಹುದು. ಸರ್ವೇ ನಂ. 165/2 ರ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ಅದು ಯಾರ ಹೆಸರಿನಲ್ಲಿ ಇದೆ ಎಂದರೆ ಪ್ರತಿವಾದಿಯ ಹೆಸರಿನಲ್ಲಿದೆ. ಅದರ ವಿಸ್ತೀರ್ಣ ಎಷ್ಟು ಎಂದರೆ 4.08 ಎಕರೆ ಇರುತ್ತದೆ. ಆ ಸ್ಥಳಗಳು ಪ್ರತಿವಾದಿಗೆ ಹೇಗೆ ಬಂದಿದೆ ಎಂದರೆ ಸಾಕ್ಷಿ ಪ್ರತಿವಾದಿ ಉಷಾ ಎಂಬುವವರಿಂದ ಖರೀದಿ ಮಾಡಿರುತ್ತಾರೆ. ಉಷಾ ರವರಿಗೆ ಆ ಜಾಗ ಹೇಗೆ ಬಂದಿದೆ ಎಂಬುದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಅವರು ಸಹ ಖರೀದಿ ಮಾಡಿದ್ದಾರೆ ಅನಿಸುತ್ತೆ ಎಂದು ಹೇಳುತ್ತಾರೆ.

3. ನಿಮ್ಮ ಪ್ರಮಾಣ ಪತ್ರದಲ್ಲಿ ಸರ್ವೇ ನಂ. 17/2, 17/3, 17/4, 17/5 ಆಸ್ತಿಗಳು ವಾದಿಗೆ ಸೇರಿದ ಆಸ್ತಿಗಳು ಅಲ್ಲ ಎಂದು ತಿಳಿಸಿದ್ದು, ನಿಮ್ಮ ಪ್ರಕಾರ ಅದು ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಅದು ಅವರ ಕುಟುಂಬದ ಆಸ್ತಿ ಅನಿಸುತ್ತೆ ಎಂದು ಹೇಳುತ್ತಾರೆ. ಸಾಕ್ಷಿಗೆ ಫಾರಂ ನಂ. 10 ರ ಪ್ರತಿಯನ್ನು ತೋರಿಸಿ ಅದರಲ್ಲಿ ಸರ್ವೇ ನಂ. 17/2, 17/3, 17/4, 17/5 ಉಮ್ಮಕ್ಕ ಕೋಂ ಅಮ್ಮಿ ಪೂಜಾರಿ ಮತ್ತು ಮಕ್ಕಳಾದ ಯುಮನ, ಯಶೋಧ, ಹೇಮಾವತಿ ರವರ ಹೆಸರಿನಲ್ಲಿ ಇದೆ ಎಂದು ಪ್ರತಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಅವುಗಳನ್ನು ನೋಡಿ ಹೌದು ಎಂದು ಒಪ್ಪಿಕೊಂಡ ಮೇರೆಗೆ ವಾದಿಯ ಪರವಾಗಿ ಸದರಿ ದಾಖಲೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ಸರ್ವೇ ನಂ. 112/ಪಿ1 ಜಾಗದ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ 3.80 ಎಕರೆ ಎಂದು ಹೇಳುತ್ತಾರೆ. ಸರ್ವೇ ನಂ. 17/2, 17/3, 17/4, 17/5 ಜಾಗದ ಪೂರ್ವ ದಿಕ್ಕಿಗೆ ಲಗ್ತಿಯಾಗಿ ಸರ್ವೇ ನಂ. 112 ಕಾಣುತ್ತದೆ ಎಂದರೆ ಹೌದು, ಆದರೆ ಆ ನಕ್ಷೆಯಲ್ಲಿ ತೋರಿಸಿರುವುದು ಸರಿಯಲ್ಲ, ಸರ್ವೇ ನಂ. 112 ರಲ್ಲಿ ಪ್ರತಿವಾದಿಯ ಜಾಗ ಸೇರಿಕೊಂಡಿಲ್ಲ ಎಂದು ಹೇಳುತ್ತಾರೆ. ಸರ್ವೇ ನಂ. 112 ಮತ್ತು 165 ರ ನಕ್ಷೆಯನ್ನು ತೆಗೆದುಕೊಂಡಿದ್ದೀರಾ ಎಂದರೆ ಹೌದು, ಅದನ್ನು ಹಾಜರುಪಡಿಸುತ್ತೇವೆ.

4. ಪ್ರತಿವಾದಿ ಜಾಗ ಖರೀದಿ ಮಾಡಿ ಎಷ್ಟು ವರ್ಷ ಆಗಿದೆ ಎಂದರೆ ಸಾಕ್ಷಿ 17 ವರ್ಷ ಎಂದು ಹೇಳುತ್ತಾರೆ. ವಾದಿಯರು ದಾವಾ ಆಸ್ತಿಯಲ್ಲಿ ಮತ್ತು ಸರ್ವೇ ನಂ. 17/2, 17/3, 17/4, 17/5 ರಲ್ಲಿ ಸುಮಾರು 70 ವರ್ಷಗಳಿಂದ ಕೃಷಿಯನ್ನು ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ 35 ವರ್ಷ ಆಗಿರಬಹುದು ಎಂದು ಹೇಳುತ್ತಾರೆ. ಸರ್ವೇ ನಂ. 165/2 ಸ್ವತ್ತಿನ ಯಾವ ದಿಕ್ಕಿಗೆ ಸರ್ವೇ ನಂ. 112 ಇದೆ ಎಂದರೆ ಸಾಕ್ಷಿ ಪೂರ್ವ ದಿಕ್ಕಿಗೆ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ 498.43 ಎಕರೆ ಕಾಣುತ್ತದೆ ಎಂದರೆ ಹೌದು. ಅಷ್ಟು ಆಸ್ತಿಗಳು ಅರಣ್ಯ ಇಲಾಖೆಗೆ ವರ್ಗಾವಣೆಯಾಗಿ ಸುಮಾರು 80 ಎಕರೆ ಆಸ್ತಿ ಸರ್ಕಾರಕ್ಕೆ ಉಳಿದುಕೊಂಡಿದೆ ಎಂದರೆ ಹೌದು. ಆ 80 ಎಕರೆ ಆಸ್ತಿಗಳು ಕದೀಂ ಪಟ್ಟದಾರರ ಲಗ್ತಿ ಕುಮ್ಕಿ ಆಸ್ತಿಗಳು ಎಂದರೆ ಇಲ್ಲ. ಕುಮ್ಕಿ ಹಕ್ಕು ಯಾರಿಗೆ ಎಷ್ಟು ಬರುತ್ತದೆ ಗೊತ್ತಾ ಎಂದರೆ ಅದರ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ. ಸರ್ವೇ ನಂ. 17/2, 17/3, 17/4, 17/5 ರ ಆಸ್ತಿಯ ಪಹಣಿ ಪತ್ರಿಕೆಗಳನ್ನು ನೀವು ನೋಡಿದ್ದೀರಾ ಎಂದರೆ ಹೌದು. ಅವು ಕದೀಂ ವರ್ಗ ಆಸ್ತಿಗಳು ಎಂದರೆ ಅದರ ಬಗ್ಗೆ ತಿಳಿದುಕೊಂಡಿಲ್ಲ. ವಾದಿಯು ದಾವಾ ಆಸ್ತಿಯನ್ನು ಮಂಜೂರು ಮಾಡಿಕೊಡಬೇಕೆಂದು ತಹಶೀಲ್ದಾರ್ ರವರಿಗೆ ಅಕ್ರಮ ಸಕ್ರಮದಡಿಯಲ್ಲಿ ಅರ್ಜಿ ಸಲ್ಲಿಸಿದ ವಿಚಾರ ಗೊತ್ತಾ ಎಂದರೆ ಹೌದು, ಗೊತ್ತಿದೆ. ತಹಶೀಲ್ದಾರ್ ರವರು ಅವುಗಳನ್ನು ಮಂಜೂರು ಮಾಡಲು ಬರುವುದಿಲ್ಲ ಎಂದು ಹಿಂಬರಹ

ಕೊಟ್ಟಿದ್ದಾರೆ ಎಂದರೆ ಹೌದು. ಅದರ ಮೇಲೆ ವಾದಿಯು ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ಹೌದು. ಅಲ್ಲಿ ಸಹಾಯಕ ಆಯುಕ್ತರು ತಹಶೀಲ್ದಾರ್ ರವರ ಆದೇಶವನ್ನು ರದ್ದುಗೊಳಿಸಿ ನಿಯಮಾನುಸಾರ ಮಂಜೂರು ಮಾಡಿ ಎಂದು ಆದೇಶ ಮಾಡಿದ್ದಾರೆ ಎಂದರೆ ಹೌದು ಎಂದು ಹೇಳಿ ಸಾಕ್ಷಿ ಮುಂದುವರಿದು ತಹಶೀಲ್ದಾರ್ ರವರ ಕಚೇರಿಯಲ್ಲಿ ಅದು ಈಗಲೂ ಸಹ ಬಾಕಿ ಇದೆ, ಅದರ ಬಗ್ಗೆ ಯಾವುದೇ ತನಿಖೆಯಾಗಿಲ್ಲ ಎಂದು ಹೇಳುತ್ತಾರೆ. ವಾದಿ ದಾವಾ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದು ಯಾವುದೇ ಹಸ್ತಕ್ಷೇಪ ಮಾಡಬಾರದು ಎಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಕೇಳಿದ್ದಾರೆ, ಆದರೆ ನಮಗೆ ಯಾವುದೇ ರೀತಿ ಮಾಹಿತಿ ಬಂದಿಲ್ಲ ಎಂದು ಹೇಳುತ್ತಾರೆ. ನಿಮ್ಮ ಸ್ಥಳಗಳೇ ಬೇರೆ ದಾವಾ ಆಸ್ತಿಗಳೇ ಬೇರೆ ಎಂದರೆ ಸಾಕ್ಷಿ ಇಲ್ಲ, ಎರಡು ಸ್ಥಳಗಳು ಒಟ್ಟಿಗೆ ಸೇರಿದೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳನ್ನು ವಾದಿಯ ಹೊರತಾಗಿ ನೀವು ಸ್ವಾಧೀನ ಹೊಂದಿದ್ದೀರಿ ಅಥವಾ ದಾವಾ ಆಸ್ತಿಗಳು ಪ್ರತಿವಾದಿಯ ಜಾಗದ ಜೊತೆ ಇದೆ ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಹೌದು. ನಿಮ್ಮ ಪ್ರಕಾರ ವಾದಿಯ ಆಸ್ತಿಯಿಂದ ನಿಮ್ಮ ಆಸ್ತಿ ಎಷ್ಟು ದೂರದಲ್ಲಿ ಇದೆ ಎಂದರೆ ಸಾಕ್ಷಿ 1 ಕಿ.ಮೀ ದೂರ ಎಂದು ಹೇಳುತ್ತಾರೆ.

5. ಪ್ರತಿವಾದಿಯ ಸರ್ವೇ ನಂ. 165/2 ಕ್ಕೆ ಬೇಲಿ ಅಗಳು ಇದೆಯಾ ಎಂದರೆ ಹೌದು. ಸರ್ವೇ ನಂ. 165/2 ಆಸ್ತಿಗೆ ವಾದಿ ಬಂದು ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಹೌದು, ತೊಂದರೆ ಕೊಟ್ಟಿರುವುದಿಲ್ಲ. ವಾದಿ ಆಸ್ತಿಗೆ ತೊಂದರೆ ಕೊಡುವಾಗ ವಾದಿ ನ್ಯಾಯಾಲಯಕ್ಕೆ ಬಂದು ದಾವೆ ಸಲ್ಲಿಸಿದ್ದು ನೋಟೀಸು ಬಂದಿದೆ ಎಂದರೆ ಸಾಕ್ಷಿ ನಾವು ಅವರ ಆಸ್ತಿಗೆ ತೊಂದರೆ ಕೊಟ್ಟಿರುವುದಿಲ್ಲ, ನಮ್ಮ ಆಸ್ತಿಯಲ್ಲಿ ನಾವು ಇದ್ದೇವೆ ಎಂದು ಹೇಳುತ್ತಾರೆ. ದಾವೆಗೆ ಸಲ್ಲಿಸಿರುವ ತಕರಾರಿಗೆ ಅನುಭವ ಕೊಟ್ಟದ್ದು ಯಾರು ಎಂದರೆ ಸಾಕ್ಷಿ ಪ್ರತಿವಾದಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಮ್ಮದು ಪುಂಜಾಲಕಟ್ಟೆ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುತ್ತದೆ. ದಿಃ 30.4.2020 ರಂದು ಪ್ರತಿವಾದಿ ಮತ್ತು ಆತನ ಸಹಚರರು ದಾವಾ ಆಸ್ತಿಗೆ ಬಂದು ಬಿಲ್ಡಿಂಗನ್ನು ಕಟ್ಟಲು ಪ್ರಯತ್ನಿಸಿದ್ದಾರೆ ಎಂದು ವಾದಿ ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರತಿವಾದಿ ವಿರುದ್ಧ ದೂರು ದಾಖಲಿಸಿದ್ದಾರೆ ಎಂದರೆ ಇಲ್ಲ. ಪ್ರತಿವಾದಿ ಅಥವಾ ಅವರ ತಂದೆ ತಾಯಿ ಪುಂಜಾಲಕಟ್ಟೆ ಪೊಲೀಸ್ ಠಾಣೆಗೆ ಹೋಗಿ ಯಾವುದಾದರೂ ಹೇಳಿಕೆಯನ್ನು ಕೊಟ್ಟಿರುವುದು ಗೊತ್ತಾ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯ ತಂದೆ ತಾಯಿ ಎಲ್ಲಿದ್ದಾರೆ ಎಂದರೆ ಸಾಕ್ಷಿ ತಾಯಿ ಇರುವುದಿಲ್ಲ ಆದರೆ ತಂದೆ

ನಮ್ಮ ಜೊತೆ ಇದ್ದಾರೆ ಎಂದು ಹೇಳುತ್ತಾರೆ. ಸರ್ವೇ ನಂ. 165/2 ರ ಆಸ್ತಿಯಲ್ಲಿ ಇದ್ದಾರೆ ಎಂದು ಹೇಳುತ್ತೀರಿ ಎಂದರೆ ಹೌದು.

6. ಪ್ರತಿವಾದಿಗೆ ಕಡಬದಲ್ಲಿ ಆಸ್ತಿ ಇದೆಯಾ ಎಂದರೆ ಇಲ್ಲ. ಅವರ ತಂದೆಯವರಿಗೆ ಇದೆಯಾ ಎಂದರೆ ಹೌದು. ಅದನ್ನು ಈಗ ಮಾರಾಟ ಮಾಡಿದ್ದಾರೆ. ದಿಃ 30.4.2020 ರಂದು ವಾದಿಯ ಆಸ್ತಿಯಲ್ಲಿ ಬಿಲ್ಡಿಂಗ್ ಕಟ್ಟುವ ಹೊರತಾಗಿ ಬೇರೆ ಯಾವುದಾದರೂ ಘಟನೆ ನಡೆದಿದೆಯಾ ಎಂದರೆ ಇಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ